ನಾನು ಹಿಂದಿಯಲ್ಲೂ ಬರೆಯಬಹುದು. ಹಿಂದಿ ಮತ್ತು ಇಂಗ್ಲಿಷ್ ಎರಡರಲ್ಲೂ ಸುಲಭವಾಗಿ ಬರೆಯುತ್ತೇನೆ. ನನಗೆ ಸಮಸ್ಯೆ ಇಲ್ಲ. ಒಮ್ಮೆ ಲಖನೌ ಹಿಂದಿ ಸಾಹಿತ್ಯ ಸಂಭ್ರಮದ ವೇದಿಕೆಯಲ್ಲಿ ಹಿಂದಿಯಲ್ಲಿಯೇ ಮಾತನಾಡುತ್ತಿದ್ದೆ. ಆಗ ವೇದಿಕೆ ಮೇಲೆ ಕುಳಿತ ಒಬ್ಬರು, 'ನಿಮ್ಮ ಹಿಂದಿ ಭಾಷೆಯ ಹಿಡಿತ ಚೆನ್ನಾಗಿಯೇ ಇದೆ. ಯಾಕೆ ನೀವು ಹಿಂದಿಯಲ್ಲಿಯೇ ಬರೆಯಬಾರದು' ಎಂದು ಕೇಳಿದರು. ಆಗ ನಾನು ಕೇಳಿದೆ, 'ನಿಮ್ಮ ಹೃದಯ ಮುಟ್ಟಿಕೊಂಡು ಹೇಳಿ, ನಾನು ಹಿಂದಿಯಲ್ಲಿ ಮಾತ್ರ ಬರೆದಿದ್ದರೆ ನೀವು ನನ್ನನ್ನು ಈ ವೇದಿಕೆಗೆ ಕರೆಯುತ್ತಿದ್ದಿರಾ?' ಉತ್ತರ ಎಲ್ಲರಿಗೂ ಗೊತ್ತಿತ್ತು, ಅವರು ನಕ್ಕರು ಅಷ್ಟೆ. ಪ್ರೇಕ್ಷಕರು ಚಪ್ಪಾಳೆ ತಟ್ಟಿದರು.

ನಾನು ಬಡ ಕುಟುಂಬದಿಂದ ಬಂದವನು. ನನ್ನ ಪೋಷಕರು ಹಿಂದಿ ಮಾಧ್ಯಮದಲ್ಲೇ ಕಲಿತವರು. ಅವರು ತುಂಬಾ ಪ್ರತಿಭಾಶಾಲಿಗಳಾಗಿದ್ದರು. ಅವರಿಗೆ ಹಿಂದಿ ಮಾತ್ರ ಗೊತ್ತಿತ್ತು. ಆದ್ದರಿಂದ ಕಷ್ಟದ ದಿನಗಳನ್ನು ಅನುಭವಿಸಿದರು. ನಾವು ನಾಲ್ಕು ಜನ ಮಕ್ಕಳು. 'ನಾನು ಅನುಭವಿಸಿದ್ದನ್ನು ನಮ್ಮ ಮಕ್ಕಳು ಅನುಭವಿಸಬಾರದು' ಎಂದು ಅವರು ನಿರ್ಧಾರ ಮಾಡಿದರು. ಅವರ ಆರ್ಥಿಕ ಸ್ಥಿತಿಗೆ ಹೊರೆ ಆದರೂ, ನಮ್ಮನ್ನು ಒಳ್ಳೆಯ ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸಿದರು. ಇದು ಭಾರತದ ಪರಿಸ್ಥಿತಿ. ಏನು ಮಾಡುವುದು?

> ಒಮ್ಮೆ ಲಖನೌದಲ್ಲಿ ಒಬ್ಬರು, 'ನಿಮ್ಮ ಹಿಂದಿ ಭಾಷೆ ಚೆನ್ನಾಗಿಯೇ ಇದೆ. ಯಾಕೆ ಹಿಂದಿಯಲ್ಲಿಯೇ ಬರೆಯಬಾರದು' ಎಂದು ಕೇಳಿದರು. 'ನಿಮ್ಮ ಹೃದಯ ಮುಟ್ಟಿಕೊಂಡು ಹೇಳಿ, ನಾನು ಹಿಂದಿಯಲ್ಲಿ ಮಾತ್ರ ಬರೆದಿದ್ದರೆ ನನ್ನನ್ನು ಈ ವೇದಿಕೆಗೆ ಕರೆಯುತ್ತಿದ್ದಿರಾ?' ಉತ್ತರ ಎಲ್ಲರಿಗೂ ಗೊತ್ತಿತ್ತು... ಅವರು ನಕ್ಕರು ಅಷ್ಟೆ. ಪ್ರೇಕ್ಷಕರು ಚಪ್ಪಾಳೆ ತಟ್ಟಿದರು...

ಯಾರೋ ಒಬ್ಬ ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಸರ್ಕಾರಿ ಶಾಲೆಗಳು ಉಚಿತವಾಗಿ ಶಿಕ್ಷಣ ಕೊಡುತ್ತಿವೆ. ಆದರೆ, ಅವು ಖಾಲಿ ಹೊಡೆಯುತ್ತಿವೆ. ಖಾಸಗಿ ಶಾಲೆಗಳಿಗೆ ಪೋಷಕರು ಮಕ್ಕಳನ್ನು ಸೇರಿಸುತ್ತಿದ್ದಾರೆ. ಒಳ್ಳೆಯ ಕೆಲಸ ಸಿಗಬೇಕು ಎಂದರೆ, ಇಂಗ್ಲಿಷ್ ಬರಲೇಬೇಕು ಎನ್ನುವುದು ಪೋಷಕರಿಗೆ ಗೊತ್ತು. ಹಾಗಂತ, ನಮ್ಮ ಸಂಸ್ಕೃತಿಯನ್ನು ಮರೆಯುವುದಿಲ್ಲ. ಇದು ನಮ್ಮ ಮನೆಯ ನಿಯಮವೂ ಹೌದು. ಯಶಸ್ಸು ಗಳಿಸಬೇಕು ಎಂದರೆ, ನೀವು ಇಂಗ್ಲಿಷ್ ಕಲಿಯಲೇಬೇಕು. ಸರಿ–ತಪ್ಪು ಎನ್ನುವ ಪ್ರಶ್ನೆ ಅಲ್ಲ. ಇದು ವಾಸ್ತವ. ನಾನು ಇಂಗ್ಲಿಷ್‌ನಲ್ಲೇ ಬರೆಯುತ್ತಿರಬಹುದು. ಅದರೆ, ನಾನು ನಮ್ಮ ದೇಶದ, ನಮ್ಮವರ ಕಥೆಯನ್ನೇ ಹೇಳುತ್ತಿದ್ದೇನೆ.

◆ ನಿಮ್ಮ ಮುಂದಿನ ಕೃತಿಗಳ ಬಗ್ಗೆ ಹೇಳಿ.

ರಾಮಚಂದ್ರ ಸರಣಿ – ಇದು ಐದು ಪುಸ್ತಕಗಳ ಸರಣಿ. ಮೂರು ಪುಸ್ತಕ ಬಂದಿವೆ. ನನ್ನ ಕಲ್ಪನೆಯ ಬ್ರಹ್ಮನ ಕಥೆ, ಮಹಾಭಾರತ ಕಥೆಗಳನ್ನು ಬರೆಯಬೇಕು ಎಂದುಕೊಂಡಿರುವೆ. ಇತಿಹಾಸ ಮರೆತ ಕೆಲವು ವ್ಯಕ್ತಿಗಳು, ಮರಾಠರು, ವಿಜಯನಗರ ಸಂಸ್ಥಾನ, ರಾಣಿ ಅಬ್ಬಕ್ಕ – ಇವರ ಬಗ್ಗೆ ಬರೆಯಬೇಕು ಎಂದುಕೊಂಡಿದ್ದೇನೆ. ಇವರ ಬಗ್ಗೆ ನಮ್ಮ ಇತಿಹಾಸದಲ್ಲಿ ಕೆಲವೇ ಪುಟಗಳಲ್ಲಿ ಹೇಳಲಾಗಿದೆ. ನನ್ನ ಹತ್ತಿರ ಸುಮಾರು ಚಿಂತನೆಗಳಿವೆ, ಆದರೆ, ಸಮಯವೇ ಇಲ್ಲ!